ಶ್ರೀ ಟಿ. ಕೆ. ಕಂಬಳಿ.—ಕುಂದಗೋಳ್ ತಾಲ್ಲೂಕಿನಲ್ಲಿ 38 ಮೈಲಿ ರಸ್ತೆಯನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ತೆಗೆದುಕೊಂಡಿದ್ದಾರೆಂದು ಹೇಳಿದ್ದೀರಿ, ಆ ರಸ್ತೆಗಳು ಚೆನ್ನಾಗಿವೆಯೇ ?

ಶ್ರೀ ಜಿ. ಬಿ. ಶಂಕರ ರಾವ್.—ಅವು ಚೆನ್ನಾಗಿವೆ ಎಂದು ಮಾನ್ಯ ಸದಸ್ಯರಿಗೆ ಗೊತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ತಾನೆ ಮಾನ್ಯ ಮಂತ್ರಿಗಳು ಹೇಳಿದರು ಕೆಲವು ಸ್ಥಳಗಳಲ್ಲಿ ರಸ್ತೆಯ ಅವಶ್ಯಕತೆ ಇರಲಿಲ್ಲ, ಅದಕ್ಕೋಸ್ಕರ ಅಲ್ಲಿ ರಸ್ತೆಯನ್ನು ಮಾಡಿಸಲಿಲ್ಲ ಎಂದು ಹಾಗಾದರೆ ಮೈಸೂರು ದೇಶದಲ್ಲಿ ರಸ್ತೆಯ ಅವಶ್ಯಕತೆ ಇಲ್ಲದೆ ಇರತಕ್ಕ ಸ್ಥಳಗಳು ಎಷ್ಟು ಇವೆ ?

ಶ್ರೀ ಜಿ. ಬಿ. ಶಂಕರ ರಾವ್.—ಆ ಇನ್‌ಫರ್‌ಮೇಷನ್ ಈಗ ನನ್ನ ಹತ್ತಿರ ಇಲ್ಲ.

Repairs to the road from Malnoor to Talikote in Shorapur taluk

*Q.—561. **Sri RAJA PID NAIK** (Shorapur).—

Will the Government be pleased to state :—

(*a*) whether they are aware that road from Malnoor to Talikote in Shorapur Taluk is in a bad condition causing inconvenience to traffic ;

(*b*) if so, whether they would take immediate action to repair the said road ?

A.—**Sri G.B. SHANKAR RAO** (Parliamentary Secretary to the Minister for Public Works).—

(*a*) Yes.

(*b*) Yes, to the extent funds permit.

Sri RAJA PID NAIK.—Sir, the road being an important link connecting three districts, will the Government take immediate action to repair the same ?

Sri G. B. SHANKAR RAO.—Sir, we have taken action to improve this road. This road falls into two Divisions and the road in the Bijapur Division has been mostly mettled and the rest of it will be taken up and completed in course of time.

ಶ್ರೀ ಎನ್. ಎಂ. ಗುರ್ರೆಡ್ಡಿ.—ಇದು ಬಹಳ ಮಹತ್ವದ ರೋಡು. ಗುಲ್ಬರ್ಗಾದಿಂದ ಮಾಲನೂರು, ಮಾಲನೂರಿನಿಂದ ತಾಳೀಕೋಟೆ ಮತ್ತು ಬಿಜಾಪುರ ಡಿಸ್ಟ್ರಿಕ್ಟಿಗೆ ರೋಡುಗಳು ಹೋಗುತ್ತವೆ. ಈ ರೋಡಿನ ಕೆಲಸವನ್ನು ಆದಷ್ಟು ಜಾಗ್ರತೆ ತೆಗೆದುಕೊಂಡು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಬಿ. ಶಂಕರ ರಾವ್.—ಅದಕ್ಕೆ ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಅದನ್ನು ರಿಪೇರಿ ಮಾಡುವುದಕ್ಕೆ ಬೇಕಾದ ಮೆಟೀರಿಯಲ್ಸ್ ಎಲ್ಲವನ್ನೂ ಕಲೆಕ್ಟ್ ಮಾಡಲಾಗುತ್ತದೆ. ಇಷ್ಟರಲ್ಲೇ ಆ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

Villages that applied for Electric Power in Gulbarga Revenue Division for the last three years.

*Q.—565. **Sri J. P. SARWESH** (Serum).—

Will the Government be pleased to state :—

(*a*) the number of villages that have applied for electric power both for village electrification and I. P. Sets in Gulbarga (Revenue Division) for the last three years (District-wise information may be furnished) ;

(*b*) the number of villages with names, where work of erecting of poles and wiring is completed in the Gulbarga Division ?